ಬಾಹುಬಲಿಸ್ವಾಮಿ ಎಸ್.

ಕಲೆ: ಮನೋಹರ ಆಚಾರ್ಯ

# ನಿಸಾರ್ ಎದೆಯಂಗಳದ ಗಂಧದ ಮರ

ಕೊಕ್ಕರೆ ಹೊಸಳ್ಳಿ ಶೇಕ್ ಹೈದರ್ ನಿಸಾರ್ ಅಹಮದ್ (ಫೆ. 5, 1936 – ಮೇ 3, 2020) ಹೊಸಗನ್ನಡ ಕಾವ್ಯದ ಪ್ರಮುಖ ಕವಿಗಳಲ್ಲೊಬ್ಬರು. ಕನ್ನಡ ನಾಡು ಮತ್ತು ನುಡಿಯ ಸತ್ವದ ಜೊತೆಗೆ ಮುಸ್ಲಿಂ ಸಮುದಾಯದ ತವಕ ತಲ್ಲಣಗಳನ್ನೂ ದ್ರವ್ಯವಾಗಿಸಿಕೊಂಡಿದ್ದ ಅವರ ಕಾವ್ಯ ಹದಿನಾರಾಣೆ ಕನ್ನಡ ಕಾವ್ಯವಾಗಿ ರಸಿಕರ ಮನವನ್ನು ಸೂರೆಗೊಂಡಿದ್ದು ಸಾಹಿತ್ಯ ಚರಿತ್ರೆಯ ಒಂದು ಅಪೂರ್ವ ಅಧ್ಯಾಯ. ವಿಮರ್ಶಾ ಪರಂಪರೆಯ ಮಾತಿರಲಿ, ಜನಸಾಮಾನ್ಯರ ಎದೆಯಂಗಳದಲ್ಲೂ ಕಾವ್ಯದ ಗೆಲ್ಲು ನೆಟ್ಟ ಹೆಮ್ಮೆ ನಿಸಾರ್ ಅವರದು. ಹಾಗೆ ಅವರ ಸ್ನೇಹಸಂಪರ್ಕದ ಸವಿ ಸವಿದ ಸಾಮಾನ್ಯ ವ್ಯಕ್ತಿಯೊಬ್ಬರು ಕಟ್ಟಿಕೊಟ್ಟಿರುವ ಆಪ್ತ ನೆನಪುಗಳ ಸ್ಮೃತಿಚಿತ್ರ ಕವಿ ಬದುಕಿನ ಹೆಚ್ಚು ಪರಿಚಿತವಲ್ಲದ ಮಗ್ಗುಲೊಂದನ್ನು ಕಾಣಿಸುವಂತಿದೆ.